ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

कर्नाटक-संस्कृत-विश्वविद्यालयः
श्री चामराजेन्द्र संस्कृत महाविद्यालयस्य परिसरः
पम्पमहाकविमार्गः, चामराजपेटे, बेङ्गलूरु – ५६००१८.

**ಸಂಖ್ಯೆ: KSU/BBS/01/2023-24** **ದಿನಾಂಕ: 30.12.2023**

## ಸೂಚನಾ ಪತ್ರ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ದಿನಾಂಕ 12.01.2024 ರಿಂದ ನಡೆಯುವ **"ಸರಳಮಾನಕ ಸಂಸ್ಕೃತಮ್"** ಸರಣಿಯ ಹತ್ತು ದಿನಗಳ ಕಾರ್ಯಾಗಾರಗಳನ್ನು ಅನುಬಂಧದಲ್ಲಿ ಸೂಚಿಸಿರುವಂತೆ ವಿವಿಧ ಸ್ಥಳಗಳಲ್ಲಿ ನಡೆಸಲಿದ್ದು, ಈ ಕಾರ್ಯಾಗಾರದಲ್ಲಿ ಕರ್ನಾಟಕದ ವಿವಿಧ ಶಿಕ್ಷಣ ಸಂಸ್ಥೆಗಳಿಂದ ಶಿಕ್ಷಕರು ಭಾಗವಹಿಸಲಿದ್ದಾರೆ. ಈ ಕಾರ್ಯಾಗಾರದಲ್ಲಿ ಭಾಗವಹಿಸುವ ಆಯೋಜಕರು, ಶಿಕ್ಷಕರಿಗೆ ತಿಂಡಿ, ಊಟದ ವ್ಯವಸ್ಥೆಯನ್ನು ಕಲ್ಪಿಸಬೇಕಾಗಿದೆ. ಕಾರ್ಯಕ್ರಮಕ್ಕೆ ಉಪಹಾರ ಹಾಗೂ ಊಟ ಸರಬರಾಜು ಮಾಡಲು ಆಸಕ್ತ ಸಂಸ್ಥೆಗಳಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 & 2000 ರನ್ವಯ ನಿಯಮ 4(i) & (ii) ರ ತಿದ್ದುಪಡಿ ವಿದೇಯಕದಂತೆ ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ.

**ಪ್ರತಿ ಕಾರ್ಯಕ್ರಮಕ್ಕೆ ಒದಗಿಸಬೇಕಾದ ಊಟೋಪಚಾರದ ವಿವರ:**

| ಕ್ರ.ಸಂ. | ವಿವರ | ಪ್ರಮಾಣ | ದರ |
|---|---|---|---|
| 01 | ಬೆಳಗಿನ ಟೀ ಮತ್ತು ಕಾಫಿ | 150 ಜನ | |
| 02 | ಮಧ್ಯಾಹ್ನದ ಊಟ (ಅನ್ನ, ಸಾಂಬಾರ್, ರಸಂ, ಮಜ್ಜಿಗೆ, ಸ್ವೀಟ್) | 150 ಜನ | |
| 03 | ಸಂಜೆ ಟೀ/ಕಾಫಿ ಮತ್ತು ವಡೆ/ಬಜ್ಜಿ | 150 ಜನ | |

**ಸರಬರಾಜು ಮಾಡಬೇಕಾದ ದಿನಾಂಕ ಮತ್ತು ಸ್ಥಳದ ವಿವರ:**

**ಅನುಬಂಧ**

| ಕ್ರ. ಸಂ. | ಕಾರ್ಯಕ್ರಮದ ದಿನಾಂಕ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|
| 01 | 12.01.2024 | ಶ್ರೀ ಮನ್ಮಹಾರಾಜ ಸಂಸ್ಕೃತ ಕಾಲೇಜು, ಮೈಸೂರು. |
| 02 | 16.01.2024 | ಶ್ರೀ ರಾಜರಾಜೇಶ್ವರಿ ಸಂಸ್ಕೃತ ಮಹಾವಿದ್ಯಾಲಯ, ಸ್ವರ್ಣವಲ್ಲಿ, ಸಿರ್ಸಿ. |
| 03 | 18.01.2024 | ಪ್ರಕಾಶಸ್ಮೃತಿ ಭವನ, ಕುಮುಟಾ. |
| 04 | 19.01.2024 | ಚಿಗುರು ಸಭಾಂಗಣ ವಾಸವಿ ಶಾಲೆ, ಶಿವಮೊಗ್ಗ. |
| 05 | 20.01.2024 | ಸಿ.ಎಲ್.ವೈ ಕಾಲೇಜು, ಧಾರವಾಡ. |
| 06 | 24.01.2024 | ನಿತ್ಯಾನಂದ ಆಶ್ರಮ, ಬಳ್ಳಾರಿ. |
| 07 | 24.01.2024 | ನ್ಯಾಷನಲ್ ಕಾಲೇಜು, ಬಸವನಗುಡಿ, ಬೆಂಗಳೂರು. |
| 07 | 27.01.2024 | ರಾಮಕೃಷ್ಣ ಮಠ, ಮಂಗಳೂರು. |
| 08 | 30.01.2024 | ಶ್ರೀ ಸಿದ್ಧಲಿಂಗೇಶ್ವರ ವೇದ ಸಂಸ್ಕೃತ ಕಾಲೇಜು, ಶ್ರೀ ಸಿದ್ಧಗಂಗಾ ಮಠ, ತುಮಕೂರು. |
| 10 | 31.01.2024 | ಕೆ.ಇ.ಸಿ.ಎಸ್ ಸಂಸ್ಕೃತ ಪಾಠಶಾಲೆ, ಬೆಂಗಳೂರು. |

ಮೇಲ್ಕಂಡಂತೆ ಊಟದ ವ್ಯವಸ್ಥೆ ಕಲ್ಪಿಸುವ ಸಂಬಂಧ ವಿವಿಧ ಅರ್ಹ ಸಂಸ್ಥೆಗಳಿಂದ ದರಪಟ್ಟಿಗಳನ್ನು ಕರೆಯಲಾಗಿದೆ. ಆಸಕ್ತರು **'ಕುಲಸಚಿವರು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು'** ಇವರಿಗೆ ಈ ಸೂಚನಾ ಪತ್ರದ ದಿನಾಂಕದಿಂದ 07 ದಿನಗಳೊಳಗಾಗಿ ಸಲ್ಲಿಸಲು ಸೂಚಿಸಿದೆ.

30/12/23

Deputy Registrar
Karnataka Samskrit University
Chamarajpete, Bengaluru-560018

ಅರ್ಹತಾ ಷರತ್ತುಗಳು:

1. ಮುಚ್ಚಿದ ಲಕೋಟೆಯ ಮೇಲೆ **"ಸರಳಮಾನಕ ಸಂಸ್ಕೃತಮ್ ಕಾರ್ಯಕ್ರಮಕ್ಕೆ ಉಪಹಾರ ಹಾಗೂ ಊಟ ಸರಬರಾಜು ಮಾಡಲು ದರಪಟ್ಟಿ "** ಎಂದು ಸ್ಪಷ್ಟವಾಗಿ ನಮೂದಿಸತಕ್ಕದ್ದು.
2. ಸರಬರಾಜು ಮಾಡಲು ಇಚ್ಛಿಸುವ ಸಂಸ್ಥೆಯು ಜಿ.ಎಸ್.ಟಿ ಮತ್ತು PAN ಸಂಖ್ಯೆಯನ್ನು ಹೊಂದಿರಬೇಕು.
3. ಊಟದ ವ್ಯವಸ್ಥೆಯು ಉತ್ತಮವಾಗಿರಬೇಕು.
4. ಕುಡಿಯಲು ಬಿಸಿನೀರಿನ ಸೌಲಭ್ಯವನ್ನು ಒದಗಿಸಬೇಕು.
5. ಅನುಬಂಧದಲ್ಲಿ ತೋರಿಸಿರುವಂತೆ ಕಾರ್ಯಕ್ರಮಗಳು ವಿವಿಧ ದಿನಾಂಕಗಳಂದು ವಿವಿಧ ಸ್ಥಳಗಳಲ್ಲಿ ನಡೆಯಲಿದ್ದು, ಸರಬರಾಜುದಾರರು ಅವರ ಸ್ವಂತ ಜವಾಬ್ದಾರಿಯಿಂದ ಒದಗಿಸಬೇಕು.
6. ದರಪಟ್ಟಿಯಲ್ಲಿ ನಮೂದಿಸಿರುವ ಸಾಮಗ್ರಿಗಳ ಪ್ರಮಾಣವನ್ನು ಹೆಚ್ಚಿಸುವ, ಕಡಿಮೆಗೊಳಿಸುವ ಅಥವಾ ರದ್ದುಪಡಿಸುವ ಹಕ್ಕನ್ನು ವಿಶ್ವವಿದ್ಯಾಲಯವು ಕಾಯ್ದಿರಿಸಿಕೊಂಡಿದೆ.
7. ದರಪಟ್ಟಿಗಳನ್ನು ಯಾವುದೇ ಕಾರಣ ನೀಡದೆ ಅಂಗೀಕರಿಸುವ ಅಥವಾ ತಿರಸ್ಕರಿಸುವ ಪೂರ್ಣ ಹಕ್ಕನ್ನು ವಿಶ್ವವಿದ್ಯಾಲಯವು ಕಾಯ್ದಿರಿಸಿಕೊಂಡಿದೆ.
8. ಷರತ್ತುಬದ್ಧ ದರಪಟ್ಟಿಗಳನ್ನು ಪರಿಗಣಿಸಲಾಗುವುದಿಲ್ಲ.
9. ದರಪಟ್ಟಿಯು ರೂ. 5 ಲಕ್ಷಗಳ ಮಿತಿಯನ್ನು ಹೊಂದಿರುತ್ತದೆ.
10. ಸರಬರಾಜು ಆದೇಶದಲ್ಲಿ ನೀಡಲಾಗುವ ಎಲ್ಲಾ ಷರತ್ತುಗಳನ್ನು ಪಾಲಿಸಬೇಕು.
11. ದರಪಟ್ಟಿಯನ್ನು ಸಲ್ಲಿಸಲು ಕೊನೆಯ ದಿನಾಂಕ:**06.01.2024.**
12. ದರಪಟ್ಟಿಗಳನ್ನು ಮುದ್ದಾಂ ಅಥವಾ ಅಂಚೆ ಮೂಲಕ ತಲುಪಿಸಬಹುದು. ಅಂಚೆಯ ವಿಳಂಬಕ್ಕೆ ಅಥವಾ ತಲುಪದಿದ್ದಲ್ಲಿ ವಿಶ್ವವಿದ್ಯಾಲಯವು ಜವಾಬ್ದಾರಿಯಾಗುವುದಿಲ್ಲ.
13. ಹೆಚ್ಚಿನ ವಿವರಗಳು ಅಥವಾ ಮಾಹಿತಿಯ ಅಗತ್ಯವಿದ್ದಲ್ಲಿ **ಡಾ. ಮಂಜುನಾಥ ಭಟ್ (9483824050)** ನೋಡಲ್ ಆಫೀಸರ್, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು ಇವರನ್ನು ಸಂಪರ್ಕಿಸುವುದು.

ಆದೇಶದ ಮೇರೆಗೆ,

30/12/23

ಉಪಕುಲಸಚಿವರು
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಬೆಂಗಳೂರು

**Deputy Registrar**
**Karnataka Samskrit University**
**Chamarajpete, Bengaluru-560018**

ಪ್ರತಿಗಳು:

1. ಸೂಚನಾ ಫಲಕ.
2. ಸಿಸ್ಟಮ್ ಅನಾಲಿಸ್ಟ್, ಕಸಂವಿ, ಬೆಂಗಳೂರು.
3. ಮಾನ್ಯ ಕುಲಪತಿಗಳ ಆಪ್ತಶಾಖೆ.
4. ಕಛೇರಿ ಪ್ರತಿ.